ಅ) 1996ರ ನೇಮಕಾತಿಯಲ್ಲಿ ನಗರ ಪ್ರದೇಶದಲ್ಲಿ ಶಿಕ್ಷಕರ ಕೊರತೆ ಇಲ್ಲದಿರುವುದನ್ನು ಗಮನಿಸಿ ಗ್ರಾಮೀಣ ಪ್ರದೇಶಕ್ಕೆ ಆದ್ಯತೆ ಮೇರೆಗೆ ಶಿಕ್ಷಕರನ್ನು ನೇಮಿಸಲು ತಿಳಿಸಲಾಗಿದೆ. ಜಿಲ್ಲಾ ಕೇಂದ್ರ ಹಾಗೂ ನಗರಗಳಲ್ಲಿ ಶಿಕ್ಷಕರು: ವಿದ್ಯಾರ್ಥಿಗಳ ಅನುಪಾತ 1:50 ಕ್ಕಿಂತ ಕಡಿಮೆ ಇದ್ದು ಹೆಚ್ಚುವರಿಯಾದ ಶಿಕ್ಷಕರಲ್ಲಿ ನಿವೃತ್ತಿಯಿಂದ ಉಂಟಾದ ಹುದ್ದೆಯನ್ನು ನಗರದ ಸಮೀಪವಿರುವ ಗ್ರಾಮೀಣ ಪ್ರದೇಶದ ಅಗತ್ಯವಿರುವ ಶಾಲೆಗಳಿಗೆ ಸ್ಥಳಾಂತರಿಸಿರುವುದರಿಂದ ಹುದ್ದೆ ಶೂನ್ಯವಾಗುವ ಸಂಭವ ಉಂಟಾಗುವುದಿಲ್ಲ.

ಇ) ಶಿಕ್ಷಕರ ಅಗತ್ಯವಿರುವ ಕಡೆ ನಿವೃತ್ತಿಯಿಂದ ತೆರವಾದ ಸ್ಥಾನಕ್ಕೂ ಭರ್ತಿ ಮಾಡಲಾಗಿದೆ. ಆದ್ದರಿಂದ ಶಿಕ್ಷಣ ವ್ಯವಸ್ಥೆಯು ಸೊರಗುವುದಿಲ್ಲ ಮತ್ತು ವಿದ್ಯಾರ್ಥಿಗಳ ಭವಿಷ್ಯಕ್ಕೆ ಧಕ್ಕೆಯಾಗವುದಿಲ್ಲ.

ಈ) 1) ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಕರ : ವಿದ್ಯಾರ್ಥಿಗಳ ಅನುಪಾತದಲ್ಲಿನ ತಾರತಮ್ಯ ಹೋಗಲಾಡಿಸುವುದು:

2) ಅಗತ್ಯವಿರುವ ಶಾಲೆಗಳಿಗೆ ಶಿಕ್ಷಕರನ್ನು ನೇಮಿಸುವುದು.

3) ಗ್ರಾಮೀಣ ಪ್ರದೇಶದಲ್ಲಿ ಶಿಕ್ಷಕರ ಕೊರತೆಯನ್ನು ಕಡಿಮೆ ಮಾಡುವುದು ಸರ್ಕಾರದ ನಿಲುವಾಗಿದೆ.

ಪಠ್ಯ ಪುಸ್ತಕ ನಿರ್ದೇಶನಾಲಯದ ಕಾರ್ಯ

2173 - ಶ್ರೀ ಕುಂಬ್ಳೆ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಠ್ಯಪುಸ್ತಕ ನಿರ್ದೇಶನಾಲಯದ ಕಾರ್ಯವೇನು?

ಆ) ಎರಡನೇ ತರಗತಿಯ ಕನ್ನಡ ಪ್ರಥಮ ಭಾಷೆಯ ಪಠ್ಯಪುಸ್ತಕ ಕನ್ನಡ ಭಾರತಿ ಪುಸ್ತಕದಲ್ಲಿರುವ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಲೋಪದೋಷಗಳನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು) :

ಅ) ಒಂದನೇ ತರಗತಿಯಿಂದ ಹತ್ತನೇ ತರಗತಿವರೆಗಿನ ಪಠ್ಯಪುಸ್ತಕಗಳ ರಚನೆ ಹಾಗೂ ಸಂಸ್ಕರಣೆ

ಆ) ಸರ್ಕಾರದ ಗಮನಕ್ಕೆ ಬಂದಿದೆ.

ಇ) ಪ್ರಾರಂಭದಲ್ಲಿ ರಚಿಸಿದ 2ನೇ ಕನ್ನಡ ಭಾರತಿ ಪಠ್ಯಪುಸ್ತಕದಲ್ಲಿ 30 ಪಾಠಗಳಿದ್ದವು. 1996-97 ಸಾಲಿನಲ್ಲಿ ಪಠ್ಯಪುಸ್ತಕಗಳ ಸಂಸ್ಕರಣೆ ನಡೆಸಿದಾಗ ತಜ್ಞರು 5 ಪಾಠಗಳನ್ನು ಕೈಬಿಡಲು ಸಲಹೆ

ನೀಡಿದ್ದರು ಆದರಂತೆ ಆ ಪಾಠಗಳನ್ನು ಕೈಬಿಡಲಾಗಿದೆ. ಪ್ರಕಾಶಕರು ಮುದ್ರಿಸಿದ ಪಠ್ಯಪುಸ್ತಕಗಳಲ್ಲಿ 30 ಪಾಠಗಳ ಹೆಸರುಗಳನ್ನು ಸಿಲಬಸ್ ಜಾಗದಲ್ಲಿ ಮುದ್ರಿಸಿರುತ್ತಾರೆ. ಆದರೆ ನಿಗಧಿಪಡಿಸಿದಂತೆ 25 ಪಾಠಗಳನ್ನು ಪಠ್ಯದಲ್ಲಿ ಮುದ್ರಿಸಿರುತ್ತಾರೆ. ಪರಿವಿಡಿಯಲ್ಲಿ ಕೈಬಿಟ್ಟಿರುವ 5 ಪಾಠಗಳನ್ನು ಮುದ್ರಿಸಿರುವುದರಿಂದ ವಿಷಯಸೂಚಿಯಲ್ಲಿ ನಮೂದಿಸಿರುವ ಪುಟ ಸಂಖ್ಯೆಗೂ, ಪಾಠಗಳಿರುವ ಪುಟಸಂಖ್ಯೆಗೂ ವ್ಯತ್ಯಾಸ ಕಂಡುಬಂದಿತು. ಇದನ್ನು ತಕ್ಷಣ ಸರಿಪಡಿಸುವ ಕ್ರಮ ಕೈಗೊಳ್ಳಲಾಗಿದೆ.

ವಿದ್ಯಾವಿಕಾಸ ಯೋಜನೆ ಕುರಿತು.

2174 - ಶ್ರೀ ಕುಂಬೈ ಸುಂದರರಾವ್ (ಸುರತ್ಕಲ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ವಿದ್ಯಾವಿಕಾಸ ಯೋಜನೆಯಡಿಯಲ್ಲಿ ಎಷ್ಟು ಶಾಲೆಗಳಿಗೆ ಪಠ್ಯಪುಸ್ತಕಗಳನ್ನು ಒದಗಿಸಲಾಗಿದೆ?*

ಆ) *ಸಮಯಕ್ಕೆ ಸರಿಯಾಗಿ ವಿತರಣೆ ಆಗಿಲ್ಲ ಎಂಬ ಸಾರ್ವಜನಿಕರ ದೂರು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಸದರಿ ಸಮಸ್ಯೆ ಬಗೆಹರಿಸುವ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು) :

ಅ) 22,783 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಿಗೆ ಮತ್ತು 16,083 ಹಿರಿಯ ಪ್ರಾಥಮಿಕ ಶಾಲೆಗಳಿಗೆ ಒಟ್ಟು 38,866 ಶಾಲೆಗಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಒದಗಿಸಲಾಗಿದೆ.

ಆ) ಕೆಳಕಂಡ ಶೀರ್ಷಿಕೆಗಳನ್ನು ಬಿಟ್ಟು ಉಳಿದ ಎಲ್ಲಾ ಶೀರ್ಷಿಕೆಗಳನ್ನು ಶಾಲೆಗಳು ಪ್ರಾರಂಭವಾಗುವ ಮುನ್ನ ಸರಬರಾಜು ಮಾಡಲಾಗಿದೆ.

1. 2ನೇ ಉರ್ದು ಭಾರತಿ
2. 3ನೇ ಉರ್ದು ಭಾರತಿ
3. 3ನೇ ಉರ್ದು ಸಮಾಜ ವಿಜ್ಞಾನ
4. 4ನೇ ಉರ್ದು ಗಣಿತ
5. 4ನೇ ಗಣಿತ ಕನ್ನಡ

ಇವುಗಳನ್ನು ಶಾಲೆಗಳು ಪ್ರಾರಂಭವಾದ ತಕ್ಷಣ ಸರಬರಾಜು ಮಾಡಲಾಗಿದೆ.

ಇ) ಸರಬರಾಜು ಮಾಡಿರುವುದರಿಂದ ಪ್ರಶ್ನೆ ಉದ್ಭವಿಸುವುದಿಲ್ಲ.